ಪ್ರಜಾವಾಣಿ
ಮೆಟ್ರೊ
ಬೆಂಗಳೂರು

ಸಾಂಸ್ಕೃತಿಕ ಮುನ್ನೋಟ

ಫೆಬ್ರುವರಿ 18, ಗುರುವಾರ

ಶತಕಲಶಾಭಿಷೇಕ

ಶ್ರೀ ಕಾಣಿಯೂರು ಮಠ: ಬೆಂಗಳೂರು ಶಾಖೆಯ ಪ್ರಾರಂಭೋತ್ಸವ ಹಾಗೂ ಮುಖ್ಯಪ್ರಾಣ –ರಾಘವೇಂದ್ರ ಸ್ವಾಮಿಗಳಿಗೆ ಅಷ್ಟೋತ್ತರ ಶತಕಲಶಾಭಿಷೇಕ. ಸಾನ್ನಿಧ್ಯ: ವಿಶ್ವೇಶತೀರ್ಥ ಶ್ರೀಪಾದರು, ವಿದ್ಯಾವಲ್ಲಭ ತೀರ್ಥ ಶ್ರೀಪಾದರು.

ಸ್ಥಳ: ಕಾಣಿಯೂರು ಮಠ, ಮುಖ್ಯಪ್ರಾಣ ರಾಘವೇಂದ್ರ ಸ್ವಾಮಿಗಳ ಸನ್ನಿಧಿ, 4ನೇ ಮೇನ್, 3ನೇ ಬ್ಲಾಕ್, ತ್ಯಾಗರಾಜನಗರ.

ಮೃತ್ಯುಂಜಯ ಹೋಮ

ಸೋಮೇಶ್ವರಸ್ವಾಮಿ ದೇವಸ್ಥಾನ: ಮಹಾಮೃತ್ಯುಂಜಯ ಹೋಮ. ಸ್ಥಳ: ಹಲಸೂರು. ಬೆಳಿಗ್ಗೆ 9.

ಫೆಬ್ರುವರಿ 19, ಶುಕ್ರವಾರ

ಸುಗಮ ಸಂಗೀತ

ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಪರಿಷತ್ತು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಯುವ ಬರಹಗಾರರು ಮತ್ತು ಕಲಾವಿದರ ಬಳಗ: ಉದಯ ಜನಪದ ಕಲಾ ಸಂಘದಿಂದ ಸುಗಮ ಸಂಗೀತ. ಸ್ಥಳ: ಯವನಿಕಾ, ನೃಪತುಂಗ ರಸ್ತೆ. ಸಂಜೆ 6.30.

ದ್ವಂದ್ವ ವಯಲಿನ್

ಸಾಂಗೀತ್ಯ ಆಸ್ಥಾನ: ಗಣೇಶ್ ಮತ್ತು ಕುಮರೇಶ್ ಅವರಿಂದ ದ್ವಂದ್ವ ವಯಲಿನ್

ಗಣೇಶ್ ಮತ್ತು ಕುಮರೇಶ್

ವಾದನ. ಪರುಪಲ್ಲಿ ಘಾಲ್ಗುಣ (ಮೃದಂಗ), ಜಿ. ಗುರುಪ್ರಸನ್ನ (ಖಂಜರಿ).

ಸ್ಥಳ: ಸೇವಾ ಸದನ, 14ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ. ಸಂಜೆ 6.

ದಾಸರ ಆರಾಧನೆ

ಪ್ರಪಂಚ: ರಜತ ಮಹೋತ್ಸವ ಹಾಗೂ ತ್ಯಾಗರಾಜ ಮತ್ತು ಪುರಂದರದಾಸರ ಆರಾಧನಾ ಮಹೋತ್ಸವ. ಕೆ.ಎನ್. ಕೃಷ್ಣಮೂರ್ತಿ ಮತ್ತು ಕೆ.ಎನ್. ಸುರೇಂದ್ರ ಅವರಿಂದ ನಾದಸ್ವರ. ಬದರಿ ನಾರಾಯಣ ಮತ್ತು ಶ್ರೀಕಾಂತ ಶರ್ಮ ವೇದ ಪಠಣ, ಅಭಿನಂದಿನಿ ಮತ್ತು ಶಿಲ್ಪಾ ಪ್ರಾರ್ಥನೆ. ಪದ್ಮಶ್ರೀ ಎನ್. ರಮಣಿ, ಎಸ್. ಕೇಶವರಾವ್, ರಂಗಸ್ವಾಮಿ ವೆಂಕಟರಾಮನ್, ಎಚ್.ಎಸ್. ನಾಗರಾಜ್, ಬಿ.ಎಸ್.ಎಲ್. ಮೂರ್ತಿ, ಎ.ವಿ. ರಾಮಮೂರ್ತಿ, ಅರವಿಂದ ಪೆಂಡ್ಲೆ, ಲಲಿತಾಂಬ, ಓಂಕಾರ ಅವರಿಗೆ ಸನ್ಮಾನ. ಉದ್ಘಾಟನೆ: ವಿಶ್ವೇಶತೀರ್ಥ ಶ್ರೀಪಾದರು. ಅತಿಥಿಗಳು: ಎಚ್.ಎನ್. ನಾಗಮೋಹನದಾಸ್, ಸಿದ್ಧರಾಮಯ್ಯ, ಎಚ್.ಎಲ್. ಅಗರವಾಲ್, ಬಿ.ಎಸ್. ಸುಬ್ಬರಾಜು, ಕೆ. ಪುರುಷೋತ್ತಮ್, ಬಿ. ಸಚ್ಚಿದಾನಂದ ಬಾಬು, ಎಚ್.ವಿ. ಶಂಕರ್, ಹೇಮಾ ದಿವಾಕರ್, ಎ.ಎಸ್. ಮೂರ್ತಿ.

ಸ್ಥಳ: ಮಾಸ್ತಿರಂಗ ಮಂದಿರ, ಶಂಕರಮಠ ರಸ್ತೆ, ಶಂಕರಪುರಂ. ಸಂಜೆ 4.15.

ಮಹಾಭಿಷೇಕ

ಶ್ರೀ ವಿದ್ಯಾ ಗಣಪತಿ ದೇವಸ್ಥಾನ: ಶ್ರೀ ಪ್ರಸನ್ನ ಶ್ರೀನಿವಾಸ ಸ್ವಾಮಿಯವರ ಪ್ರಥಮ ವರ್ಷದ ವಾರ್ಷಿಕೋತ್ಸವ ಮತ್ತು ಶ್ರೀ ಲಕ್ಷ್ಮಿ ಸತ್ಯನಾರಾಯಣಸ್ವಾಮಿ 13ನೇ ವರ್ಷದ ಬ್ರಹ್ಮರಥೋತ್ಸವ. ಬೆಳಿಗ್ಗೆ 8ಕ್ಕೆ ಮಹಾಭಿಷೇಕ. ಸಂಜೆ 6ಕ್ಕೆ ಶುದ್ಧಿಪುಣ್ಯಾಹ, ಯಾಗಶಾಲಾ ಪ್ರವೇಶ, ರಕ್ಷಾಬಂಧನ, ಅಂಕುರಾರ್ಪಣ.

ಸ್ಥಳ: ಶ್ರೀ ವಿದ್ಯಾ ಗಣಪತಿ ದೇವಸ್ಥಾನ, 8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ.

ಗಾಯತ್ರಿ ಭರತನಾಟ್ಯ

ಬೆಂಗಳೂರು ಲಲಿತಕಲಾ ಪರಿಷತ್: ಗಾಯತ್ರಿ ತ್ರಿಭುವನ್ ಅವರಿಂದ ಭರತನಾಟ್ಯ.

ಸ್ಥಳ: ಎಚ್ಚೆನ್ ಕಲಾಕ್ಷೇತ್ರ, ಜಯನಗರ. ಸಂಜೆ 6.30.

ಇಂದು ಮತ್ತು ನಾಳೆ

ಪಂಚದಿನೋತ್ಸವ

ನವ ಮಂತ್ರಾಲಯ ಮಂದಿರ: ಆಶ್ರಮ–ಅವತಾರ ಪಂಚದಿನೋತ್ಸವ. ಗುರುವಾರ ಬೆಳಿಗ್ಗೆ 7.30ಕ್ಕೆ ವಿಶೇಷ ಅಷ್ಟೋತ್ತರ ಪಾರಾಯಣ. ಶುಕ್ರವಾರ ಬೆಳಿಗ್ಗೆ 8.30 ಕ್ಕೆ ದುರ್ಗಾಹೋಮ, ಶ್ರೀಸೂಕ್ತಹೋಮ, ಶ್ರೀರಾಮತಾರಕಹೋಮ. ಸ್ಥಳ: ನವ ಮಂತ್ರಾಲಯ ಮಂದಿರ, ಬಸವನಗುಡಿ ರಸ್ತೆ.

ಪ್ರವಚನ

ರಾಗಿಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್: ಸತ್ಯನಾರಾಯಣಾಚಾರ್ ಅವರಿಂದ ಪ್ರವಚನ. ಸ್ಥಳ: ಕುಚಲಾಂಬ ಸಾಂಸ್ಕೃತಿಕ ಮಂದಿರ, 9ನೇ ಬ್ಲಾಕ್, ಜಯನಗರ. ಸಂಜೆ 6.30.

ಧ್ಯಾನ -ಭಜನೆ

ಶ್ರೀ ಶಿವಬಾಲಯೋಗಿ ಆಶ್ರಮ: ನಿತ್ಯ ಧ್ಯಾನ ಮತ್ತು ಭಜನೆ .ಸ್ಥಳ: ಶ್ರೀ ಶಿವಬಾಲಯೋಗಿ ಆಶ್ರಮ, ಜೆ.ಪಿ. ನಗರ, 3ನೇ ಹಂತ. ನಿತ್ಯ ಸಂಜೆ 6.

ನವ್ಯ ಕಲಾ ಪ್ರದರ್ಶನ

ಆಧುನಿಕ ಕಲೆಗಳ ರಾಷ್ಟ್ರೀಯ ಗ್ಯಾಲರಿ: 'ಸ್ನೈಪ್ಸ್ ಆಫ್ ದಿ ಟೈಮ್ಸ್' ಚಿತ್ರಕಲಾ ಪ್ರದರ್ಶನ. ಸ್ಥಳ: ಮಾಣಿಕ್ಯವೇಲು ಮ್ಯಾನ್ಷನ್, 49, ಅರಮನೆರಸ್ತೆ, ಬೆಳಿಗ್ಗೆ 10 ರಿಂದ ಸಂಜೆ 5.

ಕೆ.ಜಿ. ಸುಬ್ರಾಯಶರ್ಮ ಉಪನ್ಯಾಸ

ಪರಮಾರ್ಥ ವಿಚಾರ ಸಂಘ ಟ್ರಸ್ಟ್: ಕೆ.ಜಿ. ಸುಬ್ರಾಯಶರ್ಮ ಅವರಿಂದ 'ಅಧ್ಯಾಸ ಭಾಷ್ಯಂ' ಉಪನ್ಯಾಸ. ಸ್ಥಳ: ಅಧ್ಯಾತ್ಮ ಮಂದಿರ, ವಿಶ್ವೇಶ್ವರಪುರ. ನಿತ್ಯ ಬೆಳಿಗ್ಗೆ 7.45.

ಛಾಂದೋಗ್ಯೋಪನಿಷತ್: ಇದೇ ಉಪನ್ಯಾಸಕರಿಂದ ಛಾಂದೋಗ್ಯೋಪನಿಷತ್ ಉಪನ್ಯಾಸ.

ಸ್ಥಳ: ವೇದಾಂತ ನಿಲಯ, ಸಾಕಮ್ಮ ಗಾರ್ಡನ್ಸ್, ಬಸವನಗುಡಿ. ಬೆಳಿಗ್ಗೆ 9ಕ್ಕೆ.

ಲಯ ಲಹರಿ

ಶ್ರೀ ಬನಗಿರಿ ವರಸಿದ್ಧಿ ವಿನಾಯಕ ಮಂಡಳಿ ಟ್ರಸ್ಟ್: 22ನೇ ವಾರ್ಷಿಕೋತ್ಸವ. ಗುರುವಾರ ಸಂಜೆ 6.30ಕ್ಕೆ ಅಯ್ಯನಾರ್ ಸಂಗೀತ ಶಾಲೆಯ ಕಲಾವಿದರಿಂದ ಲಯಲಹರಿ ತಾಳವಾದ್ಯ. ಶುಕ್ರವಾರ ಸಂಜೆ 5ಕ್ಕೆ ಶ್ರೀ ಅಷ್ಟಲಕ್ಷ್ಮಿ ಪೂಜೆ. ಸ್ಥಳ: ಶ್ರೀ ಬನಗಿರಿ ವರಸಿದ್ಧಿ ವಿನಾಯಕ ದೇವಾಲಯ, 100 ಅಡಿ ರಸ್ತೆ, ಬನಶಂಕರಿ 3ನೇ ಹಂತ.

ಶಯನೋತ್ಸವ

ಶ್ರೀ ಭವಾನಿಶಂಕರ ಸ್ವಾಮಿ ದೇವಾಲಯ: 72ನೇ ವರ್ಷದ ಬ್ರಹ್ಮರಥೋತ್ಸವ ಕಾರ್ಯಕ್ರಮಗಳು. ಗುರುವಾರ ಬೆಳಿಗ್ಗೆ ಅಭಿಷೇಕ. ಸಂಜೆ ಶಯನೋತ್ಸವ. ಶುಕ್ರವಾರ ಬೆಳಿಗ್ಗೆ ಮತ್ತು ಸಂಜೆ ಸುಪ್ರಭಾತ. ಸ್ಥಳ: ವಸಂತಪುರ.

ಭಜನೆ

ಸಾಯಿ ಗೀತಾಂಜಲಿ: ಭಜನೆ. ಸ್ಥಳ: ಸತ್ಯಸಾಯಿ ಸೇವಾ ಕ್ಷೇತ್ರ, 8ನೇ ಅಡ್ಡರಸ್ತೆ, 21ನೇ ಮುಖ್ಯ ರಸ್ತೆ, ಜೆ ಪಿ ನಗರ, 2ನೇ ಹಂತ. ಸಂಜೆ 6.30ಕ್ಕೆ.

ಪ್ರಾತಃ ಸಂಕಲ್ಪ ಗದ್ಯ

ಶ್ರೀ ಮದಾನಂದತೀರ್ಥ ಪ್ರವಚನ ಸಮಿತಿ: ಕಲ್ಲಾಪುರ ಪವಮಾನಾಚಾರ್ಯ ಅವರಿಂದ 'ಪ್ರಾತಃ ಸಂಕಲ್ಪ ಗದ್ಯ' ಪ್ರವಚನ. ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ಮಠ, 6ನೇ ಅಡ್ಡರಸ್ತೆ, ಅಮರಜ್ಯೋತಿನಗರ. ಸಂಜೆ 7.

ನಡೆದ ಕಾರ್ಯಕ್ರಮ... ನಡೆದ ಕಾರ್ಯಕ್ರಮ... ನಡೆದ ಕಾರ್ಯಕ್ರಮ... ನಡೆದ ಕಾರ್ಯಕ್ರಮ...ನಡೆದ ಕಾರ್ಯಕ್ರಮ... ನಡೆದ

ಇಸ್ಕಾನ್‌ನಲ್ಲಿ ಪ್ರಿಯ ಗಾನ

ಇತ್ತೀಚೆಗೆ ಪಶ್ಚಿಮ ಕಾರ್ಡ್ ರಸ್ತೆಯ ಇಸ್ಕಾನ್ ದೇವಾಲಯದಲ್ಲಿ ಗಾಯಕಿ ಪ್ರಿಯದರ್ಶಿನಿ ಅವರು ತಮ್ಮ ಸುಶ್ರಾವ್ಯ ಸಂಗೀತದಿಂದ ಎಲ್ಲರ ಗಮನ ಸೆಳೆದರು. ದಾಸರ ಪದಗಳು ಸೇರಿದಂತೆ ಮೀರಾ ಭಜನೆ ಮತ್ತು ಅನ್ನಮಾಚಾರ್ಯರ ಕೀರ್ತನೆಗಳನ್ನು ಹಾಡಿ ಸಂಗೀತ ಪ್ರೇಮಿಗಳಿಗೆ ಮುದ ನೀಡಿದರು. ಪಕ್ಕವಾದ್ಯದಲ್ಲಿ ಪ್ರಶಾಂತ್ ಹೆಗಡೆ (ತಬಲಾ), ಕಿಶನ್ (ಕೀಬೋರ್ಡ್), ಸಂದೀಪ್ (ಕೊಳಲು) ಸಹಕರಿಸಿದರು. g

ಇಟ್ಟಮಡು 2ನೇ ಮುಖ್ಯರಸ್ತೆಯ ರೇನ್‌ಬೊ ಮಾಟೆಸ್ಸರಿ ಹೌಸ್ ಆಫ್ ಚಿಲ್ಡ್ರನ್ ಲರ್ನಿಂಗ್ ಸೆಂಟರ್‌ನ ಶಾಲಾ ವಾರ್ಷಿಕೋತ್ಸವದಲ್ಲಿ ಪುಟ್ಟ ಪುಟ್ಟ ಮಕ್ಕಳು ಪ್ರದರ್ಶಿಸಿದ ಆಕರ್ಷಕ ಸಾಂಸ್ಕೃತಿಕ ಕಾರ್ಯಕ್ರಮ.

ಕೃತಿಗಳ ಲೋಕಾರ್ಪಣೆ

ಇತ್ತೀಚೆಗೆ ಹಂಪಿನಗರ ಕೇಂದ್ರ ಗ್ರಂಥಾಲಯದಲ್ಲಿ ದೊಡ್ಡರಂಗೇಗೌಡರ ಹೊಸ ಹೊನಲು, ಹಳ್ಳಿಹೈದ, ಯುಗಶಬ್ದಂ. ಬಿ.ಎಲ್. ವೇಣು ಅವರ ಬಿಚ್ಚುಗತ್ತಿ ಭರಮಣ್ಣ ನಾಯಕ. ಸತ್ಯಮೂರ್ತಿ ಅವರ ಸರಳ ಭಾರತ ಕೃತಿಗಳನ್ನು ಲೋಕಾರ್ಪಣೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಈ ಕೃತಿಗಳ ಲೇಖಕರಲ್ಲದೆ ಚಿರಂಜೀವಿ, ಗೋವಿಂದಹಳ್ಳಿ ದೇವೇಗೌಡ, ಡೆನ್ನಿಸ್‌ಪಾಲ್, ಸುಷ್ಮಾಶಂಕರ್, ನಿಡಸಾಲೆ ಪುಟ್ಟಸ್ವಾಮಯ್ಯ ಮತ್ತಿತರರು ಉಪಸ್ಥಿತರಿದ್ದರು. g

ಕಾರ್ಯಾಗಾರ ತರಬೇತಿ ಶಿಬಿರ

ವಾಟರ್ ಕಲರ್ ಕಾರ್ಯಾಗಾರ

ಬನಶಂಕರಿ 6ನೇ ಹಂತ ತಲಘಟ್ಟಪುರ ಬಳಿಯ ಭೂಮಿ ಚಿತ್ರಕಲಾ ಅಧ್ಯಯನ ಕೇಂದ್ರವು ಇಂದಿನಿಂದ ಶನಿವಾರ ವರೆಗೆ (ಫೆ.18, 19 ಮತ್ತು 20) ಹೆಸರಾಂತ ಚಿತ್ರಕಲಾವಿದ ಎಂ.ಎಸ್. ಮೂರ್ತಿ ಅವರ ಮಾರ್ಗದರ್ಶನದಲ್ಲಿ ವಾಟರ್ ಕಲರ್ (ಜಲವರ್ಣ) ಚಿತ್ರಕಲಾ ಕಾರ್ಯಾಗಾರವನ್ನು ಆಯೋಜಿಸಿದೆ. 10 ಜನರಿಗೆ ಮಾತ್ರ ಅವಕಾಶ. ಬೆಳಿಗ್ಗೆ 10 ರಿಂದ ಸಂಜೆ 4.

ಸ್ಥಳ: ಭೂಮಿ ಚಿತ್ರಕಲಾ ಅಧ್ಯಯನ ಕೇಂದ್ರ. ವಿವರಗಳಿಗೆ: 98441 57982.

ಸ್ತ್ರೀ ಆರೋಗ್ಯ ಚಿಕಿತ್ಸೆ

ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಸಂಸ್ಥೆಯು ಶನಿವಾರ (ಫೆ. 20) ಸ್ತ್ರೀಯರ ಆರೋಗ್ಯ ಸಮಸ್ಯೆಗಳಿಗೆ ಉಚಿತ ಸ್ವಯಂ ಚಿಕಿತ್ಸಾ ಸಲಹಾ ಶಿಬಿರವನ್ನು ಆಯೋಜಿಸಿದೆ.

ಇಲ್ಲಿ ಅಕ್ಯುಪ್ರೆಶರ್, ಯೋಗ, ಪ್ರಾಣಾಯಾಮ, ಹರ್ಬೊ ಥೆರಪಿ, ಡಯೆಟ್ ಥೆರಪಿ ಮುಂತಾದ ಚಿಕಿತ್ಸಾ ವಿಧಾನಗಳನ್ನು ಹೇಳಿಕೊಡಲಾಗುತ್ತದೆ.

ಸ್ಥಳ: ಆರೋಗ್ಯ ಮಂದಿರ, ಇ ಮುಖ್ಯರಸ್ತೆ, ಗಿರಿನಗರ 2ನೇ ಹಂತ. ವಿವರಗಳಿಗೆ: 95350 52064. g

ಮುನ್ನೋಟ ಮಾಹಿತಿ...

'ಪ್ರಜಾವಾಣಿ' ಮೆಟ್ರೊ ಸಾಂಸ್ಕೃತಿಕ ಮುನ್ನೋಟಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಗಳ ಮಾಹಿತಿ ಹಾಗೂ ಚಿತ್ರಗಳನ್ನು ಸಾಕಷ್ಟು ಮುಂಚಿತವಾಗಿಯೇ ಕಳಿಸಬೇಕು. ಮಂಗಳವಾರದ 'ಮೆಟ್ರೊ' ಸಂಚಿಕೆಗೆ ಈ ವಿವರ ಕಳಿಸಲು ಭಾನುವಾರ ಕೊನೆಯ ಗಡುವು. ಗುರುವಾರದ ಸಂಚಿಕೆಗೆ ಮಂಗಳವಾರ. ಶನಿವಾರದ ಸಂಚಿಕೆಗೆ ಗುರುವಾರ. ವಿವರದ ಜತೆಗೆ ಛಾಯಾಚಿತ್ರವೂ ಇದ್ದರೆ ಉತ್ತಮ. ಸಮಯ, ಸ್ಥಳ ಹಾಗೂ ಕಾರ್ಯಕ್ರಮ ನಡೆಯುವ ವಿಳಾಸವನ್ನು ಸ್ಪಷ್ಟವಾಗಿ ಬರೆದಿರಬೇಕು. ಕಾರ್ಯಕ್ರಮದ ಮಾಹಿತಿ ಹಾಗೂ ಚಿತ್ರಗಳನ್ನು ಕಳಿಸುವಾಗ, ಸಂಪಾದಕರು, ಪ್ರಜಾವಾಣಿ 'ಮೆಟ್ರೊ' ವಿಭಾಗ ಎಂದು ತಪ್ಪದೆ ಬರೆಯಿರಿ. ನುಡಿ ಅಥವಾ ಬರಹದಲ್ಲಿ ಕೀ ಮಾಡಿ metropv@gmail.com ಗೆ ಇ-ಮೇಲ್ ಮೂಲಕವೂ ಕಳುಹಿಸಬಹುದು.

ಆದದ್ದೆಲ್ಲ, ಸಿಂಗಾರೆವ್ವ

ರಂಗಶಂಕರ: ಕ್ರಿಯೇಟಿವ್ ಥಿಯೇಟರ್ ರಂಗ ಸಪ್ತಮಿ. ಗುರುವಾರ 'ಆದದ್ದೆಲ್ಲ ಒಳಿತೆ....' (ರಚನೆ: ಟಿ. ಸುನಂದಮ್ಮ/ ಸುಂದರ್, ನಿರ್ದೇಶನ: ಪ್ರಮೋದ ಶಿಗ್ಗಾಂವ). ಶುಕ್ರವಾರ 'ಸಿಂಗಾರೆವ್ವ ಮತ್ತು ಅರಮನೆ' (ರಚನೆ: ಚಂದ್ರಶೇಖರ ಕಂಬಾರ/ ಲಕ್ಷ್ಮಿ ಚಂದ್ರಶೇಖರ್, ನಿರ್ದೇಶನ: ಸೌಮ್ಯ ವರ್ಮ) ಕನ್ನಡ ನಾಟಕ. ಕಲಾವಿದರು: ಸುಂದರ್, ಲಕ್ಷ್ಮಿ ಚಂದ್ರಶೇಖರ್, ರಾಮಕೃಷ್ಣ ಕನ್ನರ್ಪಾಡಿ, ವಿದ್ಯಾ ವೆಂಕಟರಾಮ್, ಶಿಲ್ಪಾ ರುದ್ರಪ್ಪ ಮುಂತಾದವರು.

ಸ್ಥಳ: ರಂಗಶಂಕರ, ಜೆ ಪಿ ನಗರ 2ನೇ ಹಂತ. ಸಂಜೆ 7.30. g

ಆದದ್ದೆಲ್ಲ ಒಳಿತೆ....

ಜಂಗಲ್ ಆರ್ಕೆಸ್ಟ್ರಾ

ಡೆನ್ಮಾರ್ಕ್ ರಾಯಭಾರ ಕಚೇರಿ ಮತ್ತು ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಮಂಡಳಿಯ ಸಹಯೋಗದಲ್ಲಿ ಗುರುವಾರ ಡ್ಯಾನಿಷ್ ಗಿಟಾರ್ ವಾದಕ ಮತ್ತು ಸಂಗೀತ ಸಂಯೋಜಕ ಪಿಯರೆ ಡೊರ್ಗೆ ತಂಡದವರಿಂದ 'ಜಂಗಲ್ ಆರ್ಕೆಸ್ಟ್ರಾ' ಸಂಗೀತ ರಸಮಂಜರಿ.

ವಿಶ್ವದ ವಿವಿಧೆಡೆ ತಮ್ಮ ಸಂಗೀತ ರಸಮಂಜರಿಯಿಂದ ಕೇಳುಗರನ್ನು ಮೋಡಿ ಮಾಡಿದ 11 ವಾದಕರು, ಗಾಯಕರು ಈ ತಂಡದಲ್ಲಿದ್ದಾರೆ. ಅಲ್ಲದೆ ಹೆಸರಾಂತ ಕಲಾವಿದ ಚೆನ್ನೈಯ ಸುಬ್ರಹ್ಮಣ್ಯಂ ಅವರ ಅವರ ಮಗ ಶಶಾಂಕ ಕೊಳಲು ವಾದನದಿಂದ ರಂಜಿಸಲಿದ್ದಾರೆ. 12ನೇ ವರ್ಷದಲ್ಲಿಯೇ ಸಂಗೀತ ಲೋಕ ಪ್ರವೇಶಿಸಿದ ಅವರಿಗೆ ತಂದೆಯೇ ಗುರು. ಸ್ಥಳ: ಚೌಡಯ್ಯ ಸ್ಮಾರಕ ಭವನ, ವೈಯಾಲಿಕಾವಲ್. ಸಂಜೆ 6.30.

ಪಾಸ್‌ಗಳಿಗೆ: ನಂ.7/2, 1ನೇ ಮಹಡಿ, 2ನೇ ಮುಖ್ಯರಸ್ತೆ, ಪ್ಯಾಲೇಸ್ ಕ್ರಾಸ್ ರಸ್ತೆ. ಮಾಹಿತಿಗೆ: 2346 2714/ 5. g

ವರ್ಣರಂಜಿತ ಕೂಚಿಪುಡಿ

ನಾದ–ನೃತ್ಯ

ಹರ್ಷಿಣಿ ಭೂಪತಿರಾಜು

ಭಾರತದ ಪ್ರಮುಖ ನೃತ್ಯ ಪ್ರಕಾರಗಳಲ್ಲಿ ಕೂಚಿಪುಡಿಯೂ ಒಂದು. ಆಂಧ್ರದಲ್ಲಿ ಹುಟ್ಟಿ ಬೆಳೆದ ಇದರ ಬೆಳವಣಿಗೆಯಲ್ಲಿ ನರಹರಿತೀರ್ಥರು, ಸಿದ್ದೇಂದ್ರ ಯತಿಗಳ ಪ್ರಭಾವ ಗಣನೀಯ. ಈ ಶೈಲಿಯ ಕಲಾವಿದರಲ್ಲಿ ಮಂಜುಭಾರ್ಗವಿ ಅವರಿಗೆ ಒಂದು ಮೇರು ಸ್ಥಾನವಿದೆ. ಅವರು ತಮ್ಮ ಶಾಲೆ 'ನಾಟ್ಯವೇದಂ ಕೂಚಿಪುಡಿ ಇನ್‌ಸ್ಟಿಟ್ಯೂಟ್' ಮೂಲಕ ಎರಡು ದಿನಗಳ ಕೂಚಿಪುಡಿ ಉತ್ಸವವನ್ನು ಕಳೆದವಾರ ನಡೆಸಿದರು.

ಅಲ್ಲಿ ವಾರಂಗಲ್‌ನ ಹರ್ಷಿಣಿ ಭೂಪತಿರಾಜು ತನಿಯಾಗಿ ಕೂಚಿಪುಡಿ ಮಾಡಿದರು. ಬಿ. ಸುಧೀರ್‌ರಾವ್ ಅವರ ಶಿಷ್ಯೆಯಾದ ಹರ್ಷಿಣಿ (17) ಈಗಾಗಲೇ ಕೆಲ ಕಡೆ ನರ್ತಿಸಿ, ಬಹುಮಾನಗಳನ್ನೂ ಗಳಿಸಿದ್ದಾರೆ. ತನ್ನ ಕಾರ್ಯಕ್ರಮಕ್ಕೆ ನಾಟರಾಗದ ಗಣೇಶ ಸ್ತುತಿಯೊಂದಿಗೆ (ಜಯ ಜಯ ಜಯ ಸ್ವಾಮಿ) ನಾಂದಿ ಹಾಕಿ ಶಿವಸ್ತುತಿಯೊಂದಿಗೆ ಮುಂದುವರೆದರು. ಗಂಗೆ ಶಿವನ ಜಟೆ ಸೇರಿದ್ದು, ಕೈಲಾಸ ಪರ್ವತ ಎತ್ತುವುದು ಮುಂತಾದ ಘಟನೆಗಳನ್ನು ಸಂಚಾರಿಯಲ್ಲಿ ತೋರಿಸಿ, ಸ್ವಾರಸ್ಯ ಹೆಚ್ಚಿಸಿದರು.

ಸುಪ್ರಸಿದ್ಧ ಭಾಮಾ ಕಲಾಪದಲ್ಲಿ ಸತ್ಯಭಾಮೆಯ ಗರ್ವವನ್ನು ಮಿತ ಸಂಭಾಷಣೆಯೊಂದಿಗೆ ಬೆರೆಸಿ, ಹಾವಭಾವಗಳೊಂದಿಗೆ ಅಭಿನಯಿಸಿದರು. ತರಂಗದಲ್ಲಿ ತಟ್ಟೆಯ ಮೇಲೆ ನಿಂತು ನರ್ತಿಸಿದರೂ, ಜತಿಗಳು ಬಹಳ ಮಿತವಾಗೇ ಇದ್ದವು. ಸಿಕ್ಕ ಅವಕಾಶದಲ್ಲಿ ತನ್ನ ಪ್ರತಿಭೆ ತೋರಿದ ಹರ್ಷಿಣಿಗೆ ಉತ್ತಮ ಭವಿಷ್ಯವಿದೆ. ಹಿನ್ನೆಲೆಯಲ್ಲಿ ನಟುವಾಂಗದಲ್ಲಿ ಗುರು ಸುಧೀರರಾವ್, ಮೃದಂಗದಲ್ಲಿ ಶ್ರೀಧರ ಆಚಾರ್ಯ, ಕೊಳಲಿನಲ್ಲಿ ಮಧುರಾ ಹಾಗೂ ಪಿಟೀಲಿನಲ್ಲಿ ವಿ. ಬಾಲಕೃಷ್ಣ ನೆರವಾದರು.

ನಂತರದ 'ತೆಲುಗು ವೈಭವಂ'ನಲ್ಲಿ, ತೆಲುಗು ಪ್ರದೇಶದ ಸಂಸ್ಕೃತಿ ಇತಿಹಾಸ ಬೆಳೆದು ಬಂದ ಬಗೆಯನ್ನು ಒಂದು ದೊಡ್ಡ ತಂಡ ಪ್ರದರ್ಶಿಸಿತು. ರಾಮದಾಸ, ತ್ಯಾಗರಾಜ, ಕೃಷ್ಣದೇವರಾಯ ಮುಂತಾದ ಜನಪ್ರಿಯ ವ್ಯಕ್ತಿಗಳನ್ನು ತೋರಿದರಾದರೂ ಅದೊಂದು ಇಲಾಖೆಯ ಪ್ರದರ್ಶನ ವಿಭಾಗ ಎಂಬಂತೆ ಭಾಸವಾಯಿತು. ಕಲಾಕೃಷ್ಣ ಅವರ ನೃತ್ಯ ಸಂಯೋಜನೆ, ಎಸ್.ಪಿ. ಬಾಲಸುಬ್ರಹ್ಮಣ್ಯ ಅವರ ಸಂಗೀತ ಸಂಯೋಜನೆ ಇತ್ತು.

ಅಂದಿನ ಕೊನೆಯ ಕಾರ್ಯಕ್ರಮವಾಗಿ 'ಮಹಿಷಾಸುರ ಮರ್ಧಿನಿ' ಅಭಿನಯಿಸಿದರು. ಸುಪರಿಚಿತ ಮಹಿಷಾಸುರ ವಧೆ ಹಾಗೂ ದುರ್ಗೆಯ ಅವತಾರಗಳನ್ನು ಜನಪ್ರಿಯ ಶೈಲಿಯಲ್ಲಿ, ಆಡಂಬರದ ವೇಷ–ಭೂಷಣಗಳೊಡನೆ ಸಾದರಪಡಿಸಿದರು. ಮಹಿಷಾಸುರನಾಗಿ ಪಶುಪತಿ ವೆಂಕಟೇಶ್ವರರಾವ್ ಹಾಗೂ ದುರ್ಗೆಯಾಗಿ ಮೃಣಾಲಿನಿ ನರ್ತಿಸಿದರು.

ಸೀಮಾ ಜವಾಹರ್

ನೃತ್ಯನಂದನ

ರಾಜಧಾನಿ ಬೆಂಗಳೂರು ಬೆಳೆದ ಹಾಗೆ, ಅದರ ಸಾಂಸ್ಕೃತಿಕ ಅಗತ್ಯಗಳೂ ಹೆಚ್ಚುತ್ತಿವೆ. ಉಪನಗರಗಳಲ್ಲಿ ಸಂಗೀತ ನೃತ್ಯಶಾಲೆಗಳ ಅಗತ್ಯವೂ ಹೆಚ್ಚುತ್ತಿವೆ. ಈ ನಿಟ್ಟಿನಲ್ಲಿ ಬೆಂಗಳೂರು ಉತ್ತರ ಭಾಗದ ಯಲಹಂಕ ನ್ಯೂ ಟೌನ್‌ನಲ್ಲಿ 'ನೃತ್ಯನಂದನ' ಶಾಲೆ ನೂರಾರು ಜನ ಆಸಕ್ತರಿಗೆ ನೃತ್ಯ ಶಿಕ್ಷಣವನ್ನು ನೀಡುತ್ತಾ ಜನಪ್ರಿಯವಾಗುತ್ತಿದೆ.

ಅದು ನಡೆಸಿದ 'ನೃತ್ಯಸಂಜೆ'ಯಲ್ಲಿ